

# ಆಕರ್ಷಕ ದುಬೈ ತನೂರ ನೃತ್ಯ



ದುಬೈಯಲ್ಲಿ ಡೆಸರ್ಟ್ ಸಫಾರಿ ಬಹಳ ಪ್ರಸಿದ್ಧ. ಇದು ರೋಮಾಂಚಕ ಅನುಭವ ನೀಡುತ್ತದೆ. ಮರಳಿನ ರಾಶಿಯಲ್ಲಿ ಜೀಪ್‌ನಲ್ಲಿ ಬೆಲ್ಟ್ ಹಾಕೊಂಡು ಸವಾರಿ ಮಾಡುವುದು ಅದ್ಭುತ. ನಂತರ ತಂಗುದಾಣದಲ್ಲಿ ಊಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ. ಈ ಸಂದರ್ಭದಲ್ಲಿ ಕಣ್ಮನಕ್ಕೆ ಮುದ ನೀಡಿದ್ದು ಇಲ್ಲಿನ ಪ್ರಸಿದ್ಧ ತನೂರ ನೃತ್ಯ. ಇದೊಂದು ವಿಭಿನ್ನ ನಾಟ್ಯ ಪ್ರಕಾರ. ಸಾಮಾನ್ಯವಾಗಿ ಹುಡುಗರೇ ಈ ನೃತ್ಯ ಮಾಡುವುದು. ಹಾಗೆಂದು ಯುವತಿಯರು ಮಾಡುವುದೇ ಇಲ್ಲವೆಂದಲ್ಲ. ಒಬ್ಬರೇ ಮಾಡುವ ನೃತ್ಯವಿದು. ಗುಂಪಿನಲ್ಲಿ ಮಾಡುವುದು ಕಡಿಮೆ.

## ಗಮನಸೆಳೆಯುವ ಕಾಸ್ಟ್ಯೂಮ್

ನೃತ್ಯಗಾರ ಸುಮಾರು 3– 4 ಬಣ್ಣ ಬಣ್ಣದ ಸ್ಕರ್ಟ್ ಹಾಕಿಕೊಂಡಿರುತ್ತಾನೆ. ತಲೆಗೆ ಒಂದು ಪೇಟ. ಸಂಗೀತ ಮೊಳಗಿದ ಕೂಡಲೇ ನೃತ್ಯ ಆರಂಭ. ವೃತ್ತಾಕಾರವಾಗಿ ನಿತ್ತಲ್ಲೇ ತಿರುಗಲು ಪ್ರಾರಂಭಿಸುತ್ತಾನೆ. ಬಳಿಕ ಬೆತ್ತದ ಸುಮಾರು ನಾಲ್ಕು ಇಂಚು ಆಳದ ಒಂದೊಂದೇ ಬುಟ್ಟಿಗಳನ್ನು ಕೈಯಲ್ಲಿ ಸೇರಿಸುತ್ತಾ ಐದಾರು ಬುಟ್ಟಿಗಳನ್ನು ವಿಧ ವಿಧ ವಿನ್ಯಾಸದಲ್ಲಿ ಬದಲಿಸುತ್ತಾ ನೃತ್ಯ ಮಾಡುತ್ತಾನೆ. ಇದನ್ನು ನೋಡುವುದು ನಿಜಕ್ಕೂ ಕಣ್ಣಿಗೆ ಹಬ್ಬ ನೀಡಿತು.

ಈ ನೃತ್ಯದ ಇನ್ನೊಂದು ವಿಶೇಷ ಎಂದರೆ 3,4 ಸುತ್ತು ತಿರುಗುತ್ತಾ ಇರುವಂತೆಯೇ ಆ ಬುಟ್ಟಿಗಳಲ್ಲೂ ಅವರು ತೊಟ್ಟ ಬಟ್ಟೆಯಲ್ಲೂ ಲೈಟುಗಳು ಬೆಳಕನ್ನು ಹೊರ ಚೆಲ್ಲಿ ಮಿನುಗಲು ಪ್ರಾರಂಭವಾಗುತ್ತವೆ. ಡ್ಯಾನ್ಸ್ ಮಾಡುತ್ತಾ ಮಾಡುತ್ತಾ ಒಂದೊಂದೇ ಸ್ಕರ್ಟ್ ಅನ್ನು ತಲೆಯಿಂದಾಗಿ ತೆಗೆದು ಚಪ್ಪರದಂತೆ ಕೈಯಲ್ಲಿ ತಿರುಗುತ್ತಾ ನಾವು ಕುಳಿತೆಡೆ ಬರುತ್ತಾರೆ. ಹೀಗೆ ನೃತ್ಯ ನೋಡ ನೋಡುತ್ತಿದ್ದಂತೆಯೇ ಮುಗಿದು ಹೋಗುತ್ತದೆ. ಇಂತಹ ವಿಶಿಷ್ಟ ನೃತ್ಯ ದುಬೈಯಲ್ಲಿ ನೋಡಿದ್ದು ಮರೆಯಲಾರದ ಅನುಭವ ನೀಡಿತು.

■ ಕೃಷ್ಣವೇಣಿ ಪ್ರಸಾದ್ ಮುಳಿಯ